# ಬೇಡ ಬೆಂಗಳೂರು!

**ನಿರ್ಮಲಾ ಸುರತ್ಕಲ್**

ಕಲೆ: ಸಂತೋಷ್ ಸಸಿಹಿತ್ಲು



ಶಾಲೆಗೆ ಹತ್ತು ದಿನಗಳ ದಸರೆಯ ರಜೆ ಕೊಟ್ಟಿದ್ದಾರೆ. ಎಲ್ಲ ಮಕ್ಕಳು ಎಲ್ಲೆಲ್ಲಿಗೋ ಟೂರ್ ಹೋಗ್ತಾರಂತೆ. ಹುಡುಗ ಹುಡುಗಿಯರು ತಾವು ಪ್ರವಾಸಕ್ಕೆ ಹೋಗಲಿರುವ ಸಂಭ್ರಮದ ಮಾತುಕತೆಗಳನ್ನು ಕೇಳಿ ನಿಹಾಲ್ ಪೆಚ್ಚಾಗಿದ್ದ. ಅಜ್ಜಿ ಮನೆಗೆ ಹೋಗ್ತೇನೆ ಅಂದ್ರೂ ಅಪ್ಪ ಬೇಡ ಅಂದಿದ್ದಾರೆ. ಹೆಚ್ಚಿನವರೆಲ್ಲ ಬೆಂಗಳೂರಿಗೆ ಹೋಗುವವರಂತೆ. ಕಬ್ಬನ್ ಪಾರ್ಕ್, ವಿಧಾನಸೌಧ, ಬನ್ನೇರುಘಟ್ಟ, ಲಾಲ್‌ಬಾಗ್, ವಂಡರ್ ಲಾ, ಸ್ನೋ ಸಿಟಿ ಎಲ್ಲ ನೋಡಿ ಬರುವ ಸಂಭ್ರಮ ಅವರಲ್ಲಿದೆ.

ನಿಹಾಲ್ ಸಂಜೆ ಮನೆಗೆ ಬಂದವನು ಅಪ್ಪನಲ್ಲಿ, 'ಅಪ್ಪಾ, ಎಲ್ಲರೂ ಪ್ರವಾಸ ಹೋಗ್ತಿದ್ದಾರೆ. ಪಕ್ಕದ ಮನೆಯ ಸಂತೋಷನೂ ಹೋಗ್ತಾನೆ. ನಾವೂ ಬೆಂಗಳೂರಿಗೆ ಹೋಗೋಣವೇ ಅಪ್ಪ? ಅತ್ತೆ ಮನೆಯೂ ಬೆಂಗಳೂರಿನಲ್ಲೇ ಇದೆಯಲ್ಲ?' ಎಂದು ಆಸೆಯಿಂದ ಕೇಳಿದ.

'ಇಲ್ಲಿ ಇಲ್ಲದ್ದು ಅಲ್ಲೇನಿದೆಯೋ? ಅಲ್ಲದೆ ಇಲ್ಲಿ ಮೂರು ದಿನ ದುರ್ಗಾ ಪೂಜೆ, ಒಂದು ದಿನ ಮನೆ ತುಂಬಿಸುವ ಪೂಜೆ, ಒಂದು ದಿನ ಹೊಸ ಅಕ್ಕಿಯೂಟ, ಮತ್ತೊಂದು ದಿನ ಕುಲದೇವರ ಪೂಜೆಯಿದೆಯಲ್ಲ?